ದಿನಾಂಕ 14.2.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎ.ಎಸ್.ಕೆ ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ಸೆಕ್ರೆಟೆರಿಯಲ್ ಕೋರ್ಸನ್ನು ಮುಂಬೈನಲ್ಲಿ ಮಾಡಿದ್ದೇನೆ. ಅದನ್ನು ನನ್ನ ವಿವಾಹ ಪೂರ್ವದಲ್ಲಿ ಮಾಡಿದ್ದೇನೆ. ನಾನು 1972 ರಲ್ಲಿ ಎಸ್.ಎಸ್.ಎಲ್.ಸಿ ಮುಗಿಸಿ ಒಂದು ವರ್ಷದ ನಂತರ 2 ಮತ್ತು 3 ನೇ ಪ್ರತಿವಾದಿಯರು ಮುಂಬೈನಲ್ಲಿದ್ದ ಕಾರಣ ನನ್ನ ಭವಿಷ್ಯಕ್ಕಾಗಿ ನಾನು ಮುಂಬೈಗೆ ಹೋಗಿರುತ್ತೇನೆ. ನಾನು ಮುಂಬೈಗೆ ಹೋದ ಸ್ವಲ್ಪ ತಿಂಗಳಲ್ಲಿ ಸೆಕ್ರೆಟೆರಿಯಲ್ ಕೋರ್ಸ್ ಗೆ ಸೇರಿಕೊಂಡಿರುತ್ತೇನೆ. 2 ಮತ್ತು 3 ನೇ ಪ್ರತಿವಾದಿಯರು ಆ ಸಮಯದಲ್ಲಿ ಅವಿವಾಹತರಾಗಿದ್ದು, ಅಲ್ಲಿ ಕೆಲಸ ಮಾಡುತ್ತಿದ್ದರು. 1983 ರಲ್ಲಿ ನಾನು ರಘುನಾಥನ್ ನಾಯರ್ ರವರನ್ನು ವಿವಾಹವಾಗಿರುತ್ತೇನೆ. ನಾನು ಮೊಡಲ್ಲಾ ಟೆಕ್ಸ್ ಟೆಲ್ಸ್ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರುವಾಗ ಆ ಸಂಸ್ಥೆಯಲ್ಲಿ ರಘುನಾಥನ್ ನಾಯರ್ ಅದೇ ಸಂಸ್ಥೆಯಲ್ಲಿ ಉದ್ಯೋಗಿ ಆಗಿದ್ದರು, ಆಗ ಪರಿಚಯ ಆಗಿ ವಿವಾಹವಾಗಿರುತ್ತದೆ. ನಮ್ಮ ವಿವಾಹವು ಮದುವೆ ಪ್ರೀತಿಮಾಡಿ ಮತ್ತು ಗುರುಹಿರಿಯರು ಒಪ್ಪಿ ಆದ ಮದುವೆಯಾಗಿರುತ್ತದೆ. ಆ ಮದುವೆಗೆ ನನ್ನ ಕುಟುಂಬದ ಎಲ್ಲರ ಒಪ್ಪಿಗೆ ಇತ್ತು. ಮದುವೆಗೂ ಪೂರ್ವದಲ್ಲಿ ನನ್ನ ಹೆಸರು ಲೀನಾ ಪಿಂಟೋ ಎಂದು ಇತ್ತು. ನಾನು ಕ್ಯಾತೊಲಿಕ್ ಕ್ರಿಶ್ಚಿಯನ್ ಕಮಿಟಿಗೆ ಸೇರಿದವರು. ನನ್ನ ಗಂಡ ಹಿಂದೂ ಧರ್ಮಕ್ಕೆ ಸೇರಿದವರಾಗಿದ್ದರು. ಮದುವೆಯಾದ ನಂತರ ನಾನು ನನ್ನ ಗಂಡನ ಸರ್ ನೇಮ್ ನ್ನು ಒಳಗೊಂಡಂತೆ ಹೆಸರನ್ನು ಲೀನಾ ನಾಯರ್ ಎಂದು ಬದಲಾವಣೆ ಮಾಡಿಕೊಂಡಿದ್ದೇನೆ.

2. ರಘುನಾಥನ್ ನಾಯರ್ ರವರನ್ನು ಮದುವೆಯಾಗಲು ನನ್ನ ಕುಟುಂಬದವರಿಗೆ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಮದುವೆಯಾಗುವವರೆಗೆ ನಾನು 2 ಮತ್ತು 3 ನೇ ಪ್ರತಿವಾದಿಗಳ ಜೊತೆ ವಾಸವಿದ್ದೆ. ಮದುವೆಯಾದ ನಂತರ ನನ್ನ ಗಂಡನ ಜೊತೆ ವಾಸವಿದ್ದೆ. 5 ನೇ ಪ್ರತಿವಾದಿ 1977 ರ ಸುಮಾರಿಗೆ ಮುಂಬೈಗೆ ಹೋಗಿ 2 ನೇ ಪ್ರತಿವಾದಿಯ ಜೊತೆ ವಾಸಮಾಡುತ್ತಿದ್ದರು. ಆ ಸಮಯದಲ್ಲಿ 5 ನೇ ಪ್ರತಿವಾದಿ ತನ್ನ ಪದವಿ ವಿದ್ಯಾಭ್ಯಾಸವನ್ನು ಮುಂಬೈನಲ್ಲಿ ಮುಗಿಸಿ ಕೆಲಸಕ್ಕೆ ಸೇರಿಕೊಂಡಿರುತ್ತಾರೆ. 6 ನೇ ಪ್ರತಿವಾದಿ ತನ್ನ ಪದವಿ ವಿದ್ಯಾಭ್ಯಾಸವನ್ನು ಬೆಳ್ತಂಗಡಿ ತಾಲೂಕಿನಲ್ಲಿ ಮುಗಿಸಿದ ನಂತರ ಮುಂಬೈಗೆ ಬಂದಿರುತ್ತಾರೆ. 6 ನೇ ಪ್ರತಿವಾದಿ ಸಹ ಮುಂಬೈಗೆ ಬಂದು ಸ್ವಲ್ಪ ಸಮಯ ಕೆಲಸವನ್ನು ಮಾಡಿ ತದನಂತರದಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಸೇರಿ ಸ್ವಂತ ವ್ಯವಹಾರವನ್ನು ಪ್ರಾರಂಭ ಮಾಡಿರುತ್ತಾರೆ. ಯಾವ ವ್ಯವಹಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ ಮುಂಬೈಗೆ ಬಂದು ಪದವಿ

ವಿದ್ಯಾಭ್ಯಾಸವನ್ನು ಮುಗಿಸಿ ಸ್ವಲ್ಪ ಸಮಯ ಮುಂಬೈನಲ್ಲಿ ಕೆಲಸ ಮಾಡಿ ನಂತರ ವಿದೇಶಕ್ಕೆ ಹೋಗಿರುತ್ತಾರೆ. 8 ನೇ ಪ್ರತಿವಾದಿ ಮಡಂತ್ಯಾರಿನಲ್ಲಿ ವಾಸವಿದ್ದರು. ಈಗ 8 ನೇ ಪ್ರತಿವಾದಿ ಎಲ್ಲಿ ವಾಸವಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ವ್ಯವಹಾರದಲ್ಲಿ ತುಂಬಾ ನಷ್ಟವನ್ನು ಅನುಭವಿಸಿ ಊರನ್ನು ಬಿಟ್ಟು ಬೇರೆ ಕಡೆ ಹೋಗಿ ವಾಸವಿರುವ ವಿಚಾರ ನನಗೆ ಗೊತ್ತಿಲ್ಲ.

3. ನಮ್ಮ ತಂದೆ ತಾಯಿಗೆ 9 ಜನ ಮಕ್ಕಳಿದ್ದು ಅವರಲ್ಲಿ ಒಬ್ಬರು ಮರಣಹೊಂದಿರುತ್ತಾರೆ. ನನ್ನ ಅಕ್ಕನಾದ ನತಾಲಿಯಾ ಲಿಡ್ವಿನ್ ಪಿಂಟೋ ಅವಿವಾಹತರಾಗಿ ಮಾರ್ಚ್ 2005 ರಲ್ಲಿ ಮರಣಹೊಂದಿರುತ್ತಾರೆ. ಅವರ ಪೈಕಿ 3 ಮತ್ತು 5 ನೇ ಪ್ರತಿವಾದಿಯರು ಅವಿವಾಹಿತರಾಗಿದ್ದು, ಉಳಿದವರಿಗೆ ಮದುವೆಯಾಗಿರುತ್ತದೆ. 3 ಮತ್ತು 5 ನೇ ಪ್ರತಿವಾದಿಯರು ಯಾವ ಕಾರಣಕ್ಕೆ ಮದುವೆಯಾಗಿಲ್ಲ ಎಂಬುದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಇಂಡಿಯನ್ ಏರ್ ಲೈನ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು. 2003 ರಲ್ಲಿ ಸ್ವಯಃ ನಿವೃತ್ತಿಯನ್ನು ಹೊಂದಿರುತ್ತಾರೆ. ಅವರಿಗೆ ಕೆಲವು ಆರೋಗ್ಯ ಸಮಸ್ಯೆ ಇದ್ದವು. 2002 ರಲ್ಲಿ ಅನಾರೋಗ್ಯದ ಕಾರಣ 2003 ರಲ್ಲಿ ಸ್ವಯಃ ನಿವೃತ್ತಿಯನ್ನು ಹೊಂದಿರುತ್ತಾರೆ. 2002 ರಲ್ಲಿ 3 ನೇ ಪ್ರತಿವಾದಿಯ ಬಾಂಬೆಯ ಕ್ವಾಟ್ರರ್ಸ್‌ನಲ್ಲಿ ಒಬ್ಬರೇ ವಾಸವಾಗಿದ್ದರು. 3 ನೇ ಪ್ರತಿವಾದಿಗೆ ಆರೋಗ್ಯ ತಪ್ಪಿದಾಗ ಆಕೆಯನ್ನು ನಾನೇ ಸಹಕಾರ ಮಾಡುತ್ತಿದ್ದೆ. ಆಕೆ ಗುಣವಾದ ನಂತರ ಮಡಂತ್ಯಾರಿಗೆ ಬಂದಿದ್ದು, 2005 ರಲ್ಲಿ ಪುನಃ ಅನಾರೋಗ್ಯಕ್ಕೆ ಒಳಗಾದಾರ ಚಿಕಿತ್ಸೆಗಾಗಿ ಮುಂಬೈಗೆ ಬಂದಿದ್ದು, ಆ ಸಮಯದಲ್ಲಿ ದಿಃ 1.11.2005 ರಿಂದ ದಿಃ 22.1.2006 ರವರೆಗೆ ಆಕೆಯನ್ನು ನಾನೇ ನೋಡಿಕೊಂಡಿರುತ್ತೇನೆ. ದಿಃ 22.1.2006 ರ ನಂತರ 3 ನೇ ಪ್ರತಿವಾದಿ ಗುಣಮುಖರಾಗಿದ್ದು, ನಂತರ ಮಡಂತ್ಯಾರಿಗೆ ಬಂದಿರುತ್ತಾರೆ. ಆನಂತರ ಮಡಂತ್ಯಾರಿನಲ್ಲಿರುವ ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿ ನನ್ನ ತಾಯಿ ಹಾಗೂ 8 ನೇ ಪ್ರತಿವಾದಿಯ ಜೊತೆ ವಾಸವಿದ್ದರು.

4. 5 ಮತ್ತು 6 ನೇ ಪ್ರತಿವಾದಿಯರ ವ್ಯವಹಾರ ಮುಂಬೈನಲ್ಲಿ ಚೆನ್ನಾಗಿತ್ತಾ ಎಂದರೆ ನನಗೆ ಗೊತ್ತಿಲ್ಲ. ಆದರೆ ಚೆನ್ನಾಗಿ ಜೀವನ ನಡೆಸುತ್ತಿದ್ದರು. 6 ನೇ ಪ್ರತಿವಾದಿ ಈಗ ತನ್ನ ಸಂಸಾರ ಸಮೇತ ಮುಂಬೈನಲ್ಲಿ ಇದ್ದು, ಏನು ವ್ಯವಹಾರ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. 2006 ರಲ್ಲಿ 5 ನೇ ಪ್ರತಿವಾದಿ ಮುಂಬೈನಿಂದ ವಾಪಾಸು ಬಂದಿರುತ್ತಾರೆ. ಅಂದಿನಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿರುವ ಮನೆಯಲ್ಲಿ 5 ನೇ ಪ್ರತಿವಾದಿ ವಾಸವಿದ್ದಾರೆ. 8 ನೇ ಪ್ರತಿವಾದಿ ಈಗ ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿ ವಾಸವಿದ್ದಾರಾ ಎಂದು ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ನಮ್ಮ ತಂದೆ ತಾಯಿಗೆ ಗಂಡು ಮಕ್ಕಳ ಪೈಕಿ ಹಿರಿಯವರು ಎಂದರೆ ಸರಿ. 5 ನೇ ಪ್ರತಿವಾದಿ ಮುಂಬೈನಲ್ಲಿದ್ದಾಗ ಮಡಂತ್ಯಾರಿಗೆ ಆಗಾಗ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಡಂತ್ಯಾರಿನ ದಾವಾ ಸ್ವತ್ತಿನಲ್ಲಿರುವ

ಮನೆಯನ್ನು 1999-2000 ಅವಧಿಯಲ್ಲಿ ನಿರ್ಮಾಣ ಮಾಡಿರುತ್ತಾರೆ. ಮನೆಯನ್ನು ಎಷ್ಟು ಚದರ ಅಡಿಗೆ ನಿರ್ಮಾಣ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆ ಮನೆಯು ಸಾಕಷ್ಟು ದೊಡ್ಡದಾಗಿ, ವಿಶಾಲವಾಗಿ ಎಲ್ಲಾ ಸೌಲಭ್ಯಗಳು ಇರುವ ಮನೆಯಾಗಿರುತ್ತದೆ. ಮದುವೆಯಾದ ನಂತರ ನಾನು ವರ್ಷಕ್ಕೆ 3 ರಿಂದ 4 ಬಾರಿ ದಾವಾ ಸ್ವತ್ತಿಗೆ ಬಂದು ಹೋಗುತ್ತಿದ್ದೆ. 5 ಎಕರೆ ಜಮೀನಿನಲ್ಲಿ ತೆಂಗು, ಅಡಿಕೆ, ಬಾಳೆ ಇದ್ದು, ಗದ್ದೆಯು ಸಹ ಇರುತ್ತದೆ. ಅಲ್ಲದೆ ಹಣ್ಣಿನ ಗಿಡಗಳು ಸಹ ಇರುತ್ತವೆ. ಅಡಿಕೆ, ತೆಂಗು, ಬಾಳೆಯನ್ನು ಹೊರತುಪಡಿಸಿ ಇತರೆ ಹಣ್ಣು ಹಂಪಲುಗಳಿಂದ ಯಾವುದೇ ಆರ್ಥಿಕ ಆದಾಯ ಇರಲಿಲ್ಲ, ಸ್ವಂತ ಉಪಯೋಗಕ್ಕೆ ಮಾತ್ರ ಉಪಯೋಗಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ದಾವಾ ಸ್ವತ್ತಿನಿಂದ ವರ್ಷಕ್ಕೆ ಎಷ್ಟು ಉತ್ಪತ್ತಿ ಮತ್ತು ಆದಾಯ ಬರುತ್ತಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ.

5. 2006 ರ ನಂತರ 3 ನೇ ಪ್ರತಿವಾದಿಯನ್ನು ನೋಡಿಕೊಳ್ಳುವಂತೆ ಸಹೋದರ ಅಥವಾ ಸಹೋದರಿಯರ ಹತ್ತಿರ ಕೇಳಿದ್ದೀರಾ ಎಂದರೆ ಹೌದು, 5 ಮತ್ತು 6 ನೇ ಪ್ರತಿವಾದಿಗೆ ನೋಡಿಕೊಳ್ಳಲು ಹೇಳಿದ್ದೇನೆ. ಆಗ 5 ಮತ್ತು 6 ನೇ ಪ್ರತಿವಾದಿಗಳು 3 ನೇ ಪ್ರತಿವಾದಿಯನ್ನು ನೋಡಿಕೊಳ್ಳುವ ವಿಚಾರವಾಗಿ ಒಂದು ಮೀಟಿಂಗ್‌ನ್ನು ಮಾಡಿದ್ದರು. 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ಈ ದಾವೆಯ ಎಲ್ಲಾ ಪಕ್ಷಗಾರರು ಆ ಮೀಟಿಂಗ್‌ನಲ್ಲಿ ಇದ್ದೆವು. ಆ ಮೀಟಿಂಗ್‌ನಲ್ಲಿ ನಾನು ನನ್ನ ಆರೋಗ್ಯ ಸರಿಯಿಲ್ಲದ ಕಾರಣ 3 ನೇ ಪ್ರತಿವಾದಿಯನ್ನು ತಾತ್ಕಾಲಿಕವಾಗಿ ನೋಡಿಕೊಂಡು ತದನಂತರದಲ್ಲಿ ನನ್ನ ಹತ್ತಿರ ಬಿಡುವಂತೆ ಹೇಳಿದ್ದೆ. ಆ ಮೀಟಿಂಗ್‌ನಲ್ಲಿ ಅದನ್ನು ಅಂತಿಮವಾಗಿ ತೀರ್ಮಾನ ಮಾಡಿರುತ್ತೇವೆ. ಆ ಮೀಟಿಂಗ್ ನಲ್ಲಿ ಬೇರೆ ಯಾವುದಾದರೂ ಚರ್ಚೆಯಾಗಿದ್ದಾವಾ ಎಂದರೆ ಸಾಕ್ಷಿ ಆ ಸಮಯದಲ್ಲಿ ಸ್ವತ್ತಗಳನ್ನು ಭಾಗ ಮಾಡಿಕೊಳ್ಳಬೇಕು ಎಂದು ಚರ್ಚೆ ಆಗಿತ್ತು ಎಂದು ಹೇಳುತ್ತಾರೆ. ಭಾಗ ಮಾಡಿಕೊಡಬೇಕೆಂದು ಕೇಳಿದ್ದರು ಎಂದರೆ ಸಾಕ್ಷಿ 5 ಮತ್ತು 6 ನೇ ಪ್ರತಿವಾದಿ ಕೇಳಿದ್ದರು ಎಂದು ಹೇಳುತ್ತಾರೆ. ಆ ಮೀಟಿಂಗ್ ನಲ್ಲಿ ಸ್ವತ್ತು ವಿಭಾಗಕ್ಕೆ ಸಂಬಂಧಪಟ್ಟಂತೆ ಅಂತಿಮವಾಗಿ ಏನು ತೀರ್ಮಾನ ಆಯಿತು ಎಂದರೆ ಸಾಕ್ಷಿ ಮೊದಲು ತಾಯಿಯವರ ಹೆಸರಿಗೆ ಎಲ್ಲಾ ಜಮೀನುಗಳು ಬಂದ ನಂತರದಲ್ಲಿ ಯಾರಾದರೂ ಹಿಸ್ಸೆಯನ್ನು ಕೇಳಿದ್ದರೆ ಕೊಡಬೇಕು ಎಂಬ ಮಾತುಕತೆ ಆಗಿತ್ತು. ಆ ರೀತಿ ಸ್ವತ್ತು ತಾಯಿಯ ಹೆಸರಿಗೆ ವರ್ಗಾವಣೆ ಆಗಿದೆಯಾ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಕುಟುಂಬದ ಸದಸ್ಯರ ನಡುವೆ ಸಭೆಯಲ್ಲಿ ನಾನು ಸಹ ಹಿಸ್ಸೆಯನ್ನು ಕೇಳಿರುತ್ತೇನೆ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

**(ಸಾ.ಓ.ಹೇ.ಕೇ.ಸ.ಇ.ಎ.ಒ)**